ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2003ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕಗಳನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, 2003ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " 2003ನೆ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಬಿ.ಎಸ್.ಪಾಟೀಲ್ (ಸಾಸನೂರು) : ಮಾನ್ಯ ಅಧ್ಯಕ್ಷರೇ, ನನ್ನದೊಂದು ಬಿಲ್ ಇದೆ. ಎಲ್ಲರ ಬಿಲ್ ಅಂಗೀಕಾರವಾಯಿತು. ಕೇವಲ ನನ್ನದೊಂದು ಬಿಲ್ ಮಾತ್ರ ಬಾಕಿ ಇದೆ. ದಯವಿಟ್ಟು ಅದನ್ನೂ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ. ಇದು ನಿನ್ನೆಯೇ ಚರ್ಚೆಗೆ ಬರಬೇಕಾಗಿತ್ತು.

ಅಧ್ಯಕ್ಷರು : ತಮ್ಮ ಬಿಲ್ ಬಗ್ಗೆ ಚರ್ಚೆಯಾಗಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ತಮ್ಮ ಬಿಲ್ ಅನ್ನು ನಾಳೆ ಆದ್ಯತೆ ಮೇರೆಗೆ ಚರ್ಚೆಗೆ ತೆಗೆದುಕೊಳ್ಳೋಣ ಬಿಡಿ.

6. ಪ್ರಕಟಣೆ

ಸದನದ ಕಾರ್ಯಕಲಾಪಗಳು

ಅಧ್ಯಕ್ಷರು : ಈ ದಿನ ಅಂದರೆ ದಿನಾಂಕ 10ನೇ ಫೆಬ್ರವರಿ, 2004 ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹ ಸಮಿತಿಯ ಸಭೆಯಲ್ಲಿ ಬುಧವಾರ ದಿನಾಂಕ 11ನೇ ಫೆಬ್ರವರಿ, 2004ರ ಮಧ್ಯಾಹ್ನ 2 ಗಂಟೆಗೆ ಆಯವ್ಯಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ

ನೀಡಲಾಗುವುದೆಂದು ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ. ಇದರ ಜೊತೆಗೆ 11ನೇ ಫೆಬ್ರವರಿ, 2004ರಂದು ಹಾಗೂ ದಿನಾಂಕ 12ನೇ ಫೆಬ್ರವರಿ, 2004 ರಂದು ಕೆಳಕಂಡ ಕಾರ್ಯಕ್ರಮಗಳನ್ನು ನಡೆಸಲಾಗುವುದು :

ದಿನಾಂಕ 11ನೇ ಫೆಬ್ರವರಿ, 2004

1. ಸಾಯಂಕಾಲ 6 ಗಂಟೆಗೆ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರಿಂದ ಚಹಾ ಕೂಟ
2. ಸಾಯಂಕಾಲ 6.30 ಗಂಟೆಗೆ ಶಾಸಕರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು
3. ಸಾಯಂಕಾಲ 7.00 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಾರ್ಯಕ್ರಮಗಳು.
4. ರಾತ್ರಿ 8.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಭೋಜನ ಕೂಟ.

ದಿನಾಂಕ 12ನೇ ಫೆಬ್ರವರಿ, 2004

1. ಬೆಳಿಗ್ಗೆ 9.00ಗಂಟೆಗೆ ವಿಧಾನ ಸೌಧದ ಪೂರ್ವ ದ್ವಾರದ ಮುಂಭಾಗದಲ್ಲಿ ಶಾಸಕರ ಗ್ರೂಪ್ ಭಾವಚಿತ್ರಗಳನ್ನು ತೆಗೆಯುವ ಕಾರ್ಯಕ್ರಮ.

ದಯವಿಟ್ಟು ಈ ಕಾರ್ಯಕ್ರಮಗಳಿಗೆ ಎಲ್ಲರೂ ಬರಬೇಕೆಂದು ವಿನಂತಿ.

ಶ್ರೀ ಜಿ.ಎಸ್. ಪಾಟೀಲ್ (ಸಾಸನೂರು) : ಮಾನ್ಯ ಅಧ್ಯಕ್ಷರೆ, ನನ್ನದೊಂದು ಬಿಲ್ ಇದೆ. ಐದೇ ನಿಮಿಷಗಳಲ್ಲಿ ಹೇಳಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ ಮೊದಲಿಗೆ ನಿಮ್ಮ ಬಿಲ್ ಅನ್ನೆ ತೆಗೆದುಕೊಳ್ಳೋಣ. ವಿರೋಧ ಪಕ್ಷದವರು ಏನನ್ನು ಮಾಡಿದರೆ ಎರಡು ನಿಮಿಷಗಳಲ್ಲಿ ಆಗುತ್ತದೆ. ಅವರು ಚರ್ಚೆ ಆಗಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಬಹಳ ಗಂಭೀರವಾದ ಬಿಲ್ ಇದೆ. ಅದರ ಹಿನ್ನಲೆ ಬಹಳ ಇದೆ. ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದ್ದರಿಂದ ನಾಳೆ ಬೆಳಿಗ್ಗೆ ಮೊದಲಿಗೆ ಅದನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು : ಅವರು ಒಪ್ಪಿದ್ದಾರೆ ಬಿಡಿ. ನನಗೆ ಜವಾಬ್ದಾರಿ ಏನಿಸಿ, ನಾನು ಮಾಡಿಕೊಳ್ಳುತ್ತೇನೆ.

ಶ್ರೀ ಸುರೇಶ್ ಕುಮಾರ್ : ಜವಾಬ್ದಾರಿ ಅಂದರೆ, ಚರ್ಚೆಗೆ ಅವಕಾಶ ಮಾಡಿಕೊಡುವುದು, ಬಿಲ್ ಪಾಸ್ ಮಾಡಿಸಿಕೊಡುವುದು ಅಂದರೆ ಹೇಗೆ ?

ಅಧ್ಯಕ್ಷರು : ನಿಮ್ಮ ಮೇಲೆ ನನಗೆ ಅಷ್ಟು ನಂಬಿಕೆ ಇದೆ. ನಂಬಿಕೆ ಇರುವುದರಿಂದ ಹೇಳುತ್ತಿದ್ದೇನೆ ಅಷ್ಟೆ.

7. ವಿತ್ತೀಯ ಕಾರ್ಯಕಲಾಪಗಳು:-

2004-2005ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

†**ಶ್ರೀ ಎ. ರಾಮದಾಸ್: (ಕೃಷ್ಣರಾಜ)** : ಮಾನ್ಯ ಅಧ್ಯಕ್ಷರೆ, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು 5ನೇ ಬಜೆಟ್‌ನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಅದರಲ್ಲೂ ಪೂರ್ಣವಾದಂಥ ಬಜೆಟ್‌ನ್ನು ಕೊಟ್ಟಿಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಐದು ವರ್ಷಗಳ ಕಾಲದ ನಂತರದಲ್ಲಿ ಚುನಾವಣೆಗಳು ನಡೆಯಬಹುದು, ಆ ದೃಷ್ಟಿಯಿಂದ ಈ ವರ್ಷವೂ ಕೂಡ ಪೂರ್ಣವಾದಂಥ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ ಎನ್ನುವಂಥ ಭಾವನೆಗಳು ನನ್ನಿಂದ ಹಿಡಿದು

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ)